# ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 04-08-2022

## ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 124/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕಃ 03/08/2022 ರಂದು 1100 ಗಂಟೆಗೆ ಹುಮನಾಬಾದ ಪಟ್ಟಣದ ವಡ್ಡರ ಗ್ರೌಂಡನಲ್ಲಿ ವಿಶ್ವಭಾರತಿ ಶಾಲೆಯ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಗೊಲಾಕಾರವಾಗಿ ಕುಳಿತುಕೊಂಡು ಅಂದರ್-ಬಾಹರ್ ಎಂಬ ನಸುಬಿನ ಇಸ್ಪೀಟ್ ಜೂಜಾಟ ಆಡುತ್ತಿದ್ದಾರೆ ಅಂತಾ ಪಿಎಸ್ಐ ರವರಿಗೆ ಬಾತ್ಮಿ ಬಂದಿದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ನೋಡಿದಾಗ ಅಲ್ಲಿ ಸಾರ್ವಜನಿಕ ಸ್ಥಳದಲ್ಲಿ ಕೆಲವು ಜನರು ಗೋಲಾಕಾರವಾಗಿ ಕುಳಿತುಕೊಂಡು ಅಂದರ್-ಬಾಹರ ಎಂಬ ನಸುಬಿನ ಇಸ್ಪೀಟ್ ಜೂಜಾಟ ಆಡುತ್ತಿರುವುದನ್ನು ಖಚಿತಪಡಿಸಿಕೊಂಡು, ಪಂಚರ ಸಮಕ್ಷಮದಲ್ಲಿ ಸಿಬ್ಬಂದಿಯವರ ಸಹಾಯದಿಂದ ಇಂದು ದಿನಾಂಕಃ 03/08/2022 ರಂದು 12ಃ05 ಗಂಟೆಗೆ ದಾಳಿ ಮಾಡಿ ಅವರನ್ನು ಹಿಡಿದುಕೊಂಡೆವು, ನಂತರ ಅವರ ಹೆಸರು ವಿಚಾರಿಸುತ್ತಾ ಅವರ ಅಂಗ ಜಡ್ತಿ ಮಾಡಲು 1) ಸಂತೊಷ ತಂದೆ ಸುಭಾಷ ವಯಃ 30 ವರ್ಷ ಜಾತಿಃ ಮರಾಠಾ ಉಃ ಡ್ರೈವರ ಸಾಃ ಶಿವಪೂರ್‌ಗಲ್ಲಿ ಹುಮನಾಬಾದ ಅಂತಾ ತಿಳಿಸಿದ್ದು, ಅವನ ಅಂಗ ಜಡ್ತಿ ಮಾಡಲು ಅವನ ಹತ್ತಿರ ಇಸ್ಪೀಟ್ ಜೂಜಾಟಕ್ಕೆ ಸಂಬಂಧಿಸಿದ 2150=00 ರೂಪಾಯಿಗಳು ಸಿಕ್ಕಿರುತ್ತವೆ. 2) ಜೀವನ ರೆಡ್ಡಿ ತಂದೆ ನಾರಾಯಣ ರೆಡ್ಡಿ ವಯಃ 39 ವರ್ಷ ಜಾತಿಃ ರೆಡ್ಡಿ ಉಃ ಖಾಸಗಿ ಕೆಲಸ ಸಾಃ ಶಿವಪೂರ ಗಲ್ಲಿ ಹುಮನಾಬಾದ ಅಂತಾ ತಿಳಿಸಿದ್ದು, ಅವನ ಅಂಗ ಜಡ್ತಿ ಮಾಡಲು ಅವನ ಹತ್ತಿರ 550=00 ರುಪಾಯಿಗಳು ಸಿಕ್ಕಿರುತ್ತವೆ. 3) ಲಿಂಗರೆಡ್ಡಿ ತಂದೆ ಸುಭಾಷರೆಡ್ಡಿ ವಯಃ 45 ವರ್ಷ ಜಾತಿಃ ಮುಸ್ಲಿಂ ಉಃ ಖಾಸಗಿ ಕೆಲಸ ಸಾಃ ಶಿವಪೂರ್ ಗಲ್ಲಿ ಹುಮನಾಬಾದ ಅಂತಾ ತಿಳಿಸಿದ್ದು, ಅವನ ಅಂಗ ಜಡ್ತಿ ಮಾಡಲು ಅವನ ಹತ್ತಿರ 750=00 ರುಪಾಯಿಗಳು ಸಿಕ್ಕಿರುತ್ತವೆ. 4) ಗೋವಿಂದ ರೆಡ್ಡಿ ತಂದೆ ಶಂಕರರೆಡ್ಡಿ ವಯಃ 39 ವರ್ಷ ಜಾತಿಃ ರೆಡ್ಡಿ ಉಃ ಕೂಲಿ ಕೆಲಸ ಸಾಃ ಶಿವಪೂರ್ ಗಲ್ಲಿ ಹುಮನಾಬಾದ ಅಂತಾ ತಿಳಿಸಿದ್ದು, ಅವನ ಅಂಗ ಜಡ್ತಿ ಮಾಡಲು ಅವನ ಹತ್ತಿರ 900=00 ರುಪಾಯಿಗಳು ಸಿಕ್ಕಿರುತ್ತವೆ. 5) ಹಣಮಂತರೆಡ್ಡಿ ತಂದೆ ಕೇಶವರೆಡ್ಡಿ ಯನಕುಶಿ ವಯಃ 38 ವರ್ಷ ಜಾತಿಃ ರೆಡ್ಡಿ ಉಃ ಮ್ಯಾಕಾನಿಕ್ ಕೆಲಸ ಸಾಃ ಶಿವಪೂರ್ ಗಲ್ಲಿ ಹುಮನಾಬಾದ ಅಂತಾ ತಿಳಿಸಿದ್ದು, ಅವನ ಅಂಗ ಜಡ್ತಿ ಮಾಡಲು ಅವನ ಹತ್ತಿರ 750=00 ರುಪಾಯಿಗಳು ಸಿಕ್ಕಿರುತ್ತವೆ. 6) ಜೈಕಾಂತ ರೆಡ್ಡಿ ತಂದೆ ಶರಣರೆಡ್ಡಿ ಉದಗೀರೆ ವಯಃ 41 ವರ್ಷ ಜಾತಿಃ ರೆಡ್ಡಿ ಉಃ ವ್ಯಾಪಾರ ಸಾಃ ಶಿವಪೂರ್ ಗಲ್ಲಿ ಹುಮನಾಬಾದ ತಾಃ ಹುಮನಾಬಾದ ಅಂತಾ ತಿಳಿಸಿದ್ದು, ಅವನ ಅಂಗ ಜಡ್ತಿ ಮಾಡಲು ಅವನ ಹತ್ತಿರ 950=00 ರುಪಾಯಿಗಳು ಸಿಕ್ಕಿರುತ್ತವೆ. ಹೀಗೆ 6 ಜನರ ಹತ್ತಿರ ಎಲ್ಲಾ ಸೇರಿ ಇಸ್ಪೀಟ್ ಜೂಜಾಟಕ್ಕೆ ಸಂಬಂಧಿಸಿದ ಒಟ್ಟು 6050=00ನಗದು ಹಣ ಮತ್ತು ಇಸ್ಪೀಟ್ ಜೂಜಾಟಕ್ಕೆ ಸಂಬಂಧಿಸಿದ 52 ಇಸ್ಪೀಟ್ ಎಲೆಗಳು ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

## ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ : 125/2022 ಕಲಂ 3, 7 ಇ.ಸಿ. ಕಾಯ್ದೆ :-

ದಿನಾಂಕ 03/08/2022 ಆಹಾರ ನಿರೀಕ್ಷಕರು ಹುಮನಾಬಾದ ರವರು ಬಾತ್ಮಿ ಮೇರೆಗೆ ಇಬ್ಬರು ಪಂಚರನ್ನು ಹಾಗು ಪಿ.ಎಸ.ಐ(ಕಾಸು) ಮತ್ತು ಪೊಲೀಸ ಸಿಬ್ಬಂದಿವರಾದ ಮಲ್ಲಪ್ಪಾ ಹೆಚ.ಸಿ 972, ಭಗವಾನ ಹೆಚ,ಸಿ 881 ಹಾಗು ಸಂತೋಷ ಸಿಪಿಸಿ 1235 ರವರಿಗೆ ಬರಮಾಡಿಕೊಂಡು ಹುಮನಾಬಾದ ಪಟ್ಟಣದ ಹಳೆ ಆರ.ಟಿ.ಓ ಚೆಕ್‌ಪೋಸ್ಟ ಹತ್ತಿರ ಬಸವಕಲ್ಯಾಣ ಕಡೆ ಹೋಗುವ ಸರ್ವಿಸ ರಸ್ತೆಯ ಮೇಲೆ ನಿಂತಿದ ಲಾರಿ ನಂ. ಎ.ಪಿ 28 ಟಿಸಿ 0876 ನೇದರಲ್ಲಿ ಸರಕಾರದಿಂದ ಸಾರ್ವಜನಿಕರಿಗೆ ವಿತರಿಸುವ ಅಕ್ಕಿ ಅಕ್ರಮವಾಗಿ ಸಂಗ್ರಹಿಸಿ ಆ ಲಾರಿಯಲ್ಲಿ ತೆಗೆದುಕೊಂಡು ಹೊಗುವ ಕುರಿತು ನಿಲ್ಲಿಸಿರುತ್ತಾರೆ ಅಂತ ಭಾತ್ಮಿ ಮೇರೆಗೆ ಆಹಾರ ನಿರೀಕ್ಷಕರು ಪಂಚರ ಸಮಕ್ಷಮದಲ್ಲಿ ಪೊಲೀಸರ ಸಹಾಯದಿಂದ ಸದರಿ ಲಾರಿಯ ಮೇಲೆ 1600 ಗಂಟೆಗೆ ದಾಳಿ ಮಾಡಿ ಅಲ್ಲಿ ಹಾಜರಿದ್ದ ಲಾರಿ ಚಾಲಕನಿಗೆ ಹಿಡಿದು ವಿಚಾರಣೆ ಮಾಡಲು ಆತನು ತನ್ನ ಹೆಸರು ಶೇಕ ಇಮಾಮ ತಂದೆ ಶೇಕ ಚಾಂದ ವಯ 37 ವರ್ಷ ಜಾತಿ ಮುಸ್ಲಿಂ ಉದ್ಯೋಗ ಲಾರಿ ಡ್ರೈವರ ಸಾ// ಮರಕುಂದಾ ತಾ// ಜಿ// ಬೀದರ ಅಂತ ತಿಳಿಸಿದ್ದು, ಸದರಿ ಲಾರಿಯಲ್ಲಿ ಸರ್ಕಾರದಿಂದ ಸಾರ್ವಜನಿಕರಿಗೆ ವಿತರಣೆಯಾಗಿರುವ ಪಿಡಿಎಸ್ ಅಕ್ಕಿ ಇದ್ದು, ಇವು ನಮ್ಮ ಮಾಲಿಕರಾದ ಮಹಮ್ಮದ ಮೋಸೀನ ಶರೀಫ ಇವರು ಹಳ್ಳಿ ಜನರಿಂದ ಖರೀದಿ ಮಾಡಿ ಅಕ್ರಮವಾಗಿ ಸಂಗ್ರಹಿಸಿದ್ದು, ನನಗೆ ಸದರಿ ಅಕ್ಕಿಯನ್ನು ಗುಜರಾತ ರಾಜ್ಯಕ್ಕೆ ಸಾಗಾಟ ಮಾಡಲು ತಿಳಿಸಿದ ಮೆರೆಗೆ ನಾನು ಸಾಗಾಟ ಮಾಡುವ ಕುರಿತು ಲಾರಿಯನ್ನು ಇಲ್ಲಿ ನಿಲ್ಲಿಸಿರುತ್ತೇನೆ ಅಂತಾ ತಿಳಿಸಿರುತ್ತಾನೆ. ಲಾರಿಯಲ್ಲಿ ಇದ್ದ ಮಾಲು ಪರೀಶಿಲಿಸಿ ನೋಡಲು ಸದರಿ ಲಾರಿಯಲ್ಲಿ ಅಂದಾಜು 50 ಕೆ.ಜಿ ಉಳ್ಳ 280 ಚೀಲಗಳು ಇದ್ದು, ಆಹಾರ ನೀರಿಕ್ಷರು ಚೇಕ್ ಮಾಡಿ ನೋಡಲು ಇವು ಪಿ.ಡಿ.ಎಸ ಅಕ್ಕಿ ಇರುತ್ತವೆ ಅಂತಾ ತಿಳಿಸಿ ಅಕ್ಕಿಯ ಅಂದಾಜು ಕಿಮ್ಮತ್ತು 3,22,000/- ರೂಪಾಯಿ ಅಂತಾ ತಿಳಿಸಿರುತ್ತಾರೆ. ಹಾಗು

ಲಾರಿಯನ್ನು ಪರಿಶೀಲಿಸಿ ನೊಡಲು ಲಾರಿ ನಂಬರ ಎಪಿ 28 ಟಿಸಿ 0876 ಇದ್ದು ಅದರ ಅಂದಾಜು ಕಿಮತ್ತು 5,00,000/- ರೂಪಾಯಿ ಇರುತ್ತದೆ. ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

ಬಸವಕಲ್ಯಾಣ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 113/ 2022 ಕಲಂ 451, 380, 392 ಐಪಿಸಿ :-

ದಿನಾಂಕ 03-08-2022 ರಂದು 2200 ಗಂಟೆಗೆ ಫಿರ್ಯಾದಿ ಶ್ರೀಮತಿ ಶ್ರೀಮತಿ ರೋಹಿಣಿ ಗಂಡ ಮಲ್ಲಿನಾಥ ಹುಲಸೂರೆ ವಯ 22 ವರ್ಷ ಜಾತಿ ಎಸ್ ಟಿ ಗೊಂಡ ಉದ್ಯೋಗ ಮನೆ ಕೆಲಸ ಸಾ: ತಾಜ ಕಾಲೋನಿ ಬಸವಕಲ್ಯಾಣ ಇವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಸಾರಾಂಶವೆನಂದರೆ ಫಿರ್ಯಾದಿಯು ದಿನಾಂಕ 03-08-2022 ರಂದು ಮುಂಜಾನೆ 7-00 ಗಂಟೆಗೆ ತನ್ನ ಮಾವರಾದ ಸುಭಾಷ ಇವರು ಪ್ರತಿ ದಿನದಂತೆ ಕಲಬುರ್ಗಿ ಫಾಮಿಲಿ ಕೋರ್ಟಗೆ ತಮ್ಮ ಕೆಲಸಕ್ಕೆ ಕಲಬುರ್ಗಿಗೆ ಹೋಗಿರುತ್ತಾರೆ. ಇವರ ಪತಿ ಮಲ್ಲಿನಾಥ ಇವರು ಪ್ರತಿದಿನದಂತೆ ಮುಂಜಾನೆ 9-00 ಗಂಟೆಗೆ ಮನೆಯಿಂದ ಅಂಗಡಿಗೆ ಹೋಗಿರುತ್ತಾರೆ ಹಾಗೂ ನನ್ನ ಮೈದುನರಾದ ಇಬ್ಬರು ಒಬ್ಬ ಕಾಲೇಜಗೆ ಮತ್ತು ಇನ್ನೊಬ್ಬ ಶಾಲೆಗೆ 10-00 ಗಂಟೆಗೆ ಹೋಗಿರುತ್ತಾರೆ. ಮನೆಯಲ್ಲಿ ಫಿರ್ಯಾದಿ, ಮಗ ಅದ್ವೀಕ ಹಾಗೂ ನನ್ನ ಅತ್ತೆ ಲಲೀತಾ ಮೂವರು ಮನೆಯಲ್ಲಿದ್ದಾಗ ಫಿರ್ಯಾದಿಯು ಹಾಲದಲ್ಲಿ ಒಬ್ಬಳೆ ಕುಳಿತಾಗ ಹೊರಗಿನಿಂದ ನಾವು ಸರಕಾರದಿಂದ ಮನೆ ಸಾನೆಟೈಸರ ಮಾಡಲು ಬಂದಿರುತ್ತೇವೆ ಅಂತಾ ಕುಗಿದಾಗ ಫಿರ್ಯಾದಿಯು ಹೊರಗೆ ಬಂದು ನೋಡಲು ಇಬ್ಬರು ವ್ಯಕ್ತಿಗಳು ಇದ್ದು ಅವರಿಗೆ ವಿಚಾರಿಸಿದಾಗ ಅವರು ಕನ್ನಡದಲ್ಲಿ ಮಾತಾಡುತ್ತಾ ನಾವು ಮನೆಗೆ ಸಾನಿಟೈಸರ್ ಮಾಡುತ್ತೇವೆ ಅಂತಾ ಹೇಳಿದಾಗ ಅವರಿಬ್ಬರಿಗೆ ರೋಡಿಗೆ ಸಾನಿಟೈಸರ ಮಾಡುತ್ತಾರೆ ಮನೆಗೆ ಎಕೆ ಅಂತಾ ವಿಚಾರಿಸಿದಾಗ ಅವರಲ್ಲಿ ಒಬ್ಬನು ಕನ್ನಡ ಭಾಷೆಯಲ್ಲಿ ಮಾತಾಡುತ್ತಾ ಸಾನಿಟೈಸರ ಸರಕಾರದಿಂದ ಮಾಡುತ್ತಿದ್ದೇವೆ ಅಂತಾ ಹೇಳಿದಾಗ ಮೊದಲು ಮಾತಾಡಿದವನು ಮನೆಯ ಎಲ್ಲಾ ಬಾಗಿಲು ತೆಗೆಯಲು ಹೇಳಿದಾಗ ಫಿರ್ಯಾದಿಯು ಬಾಗಿಲು ತೆಗೆದು ಹೋಗುವಾಗ ಬೇಡ್ ರೂಮದಲ್ಲಿ ಹಿಂದಿನಿಂದ ಇಬ್ಬರು ಬಂದು ಒಂದು ಬಟ್ಟೆಯಿಂದ ಫಿರ್ಯಾದಿಯು ಬಾಯಿ ಒತ್ತಿ ಹೀಡಿದಾಗ ಫಿರ್ಯಾದಿಯು ಬೆಹೋಷ ಆಗುವಾಗ ನನ್ನ ನೈಟಿಯಲ್ಲಿ ಇದ್ದ ಫೋನ ತೆಗೆದು ನನ್ನ ಅತ್ತೆ ಮಾಣೆಮ್ಮಾ ಇವರಿಗೆ ಫೋನ ಮಾಡಿ ಚೀರಾಡಿರುತ್ತಾರೆ ಹಿಗೆ ಮನೆಗೆ ಸಾನಿಟೈಸರ ಮಾಡುತ್ತೇವೆ ಅಂತಾ ಬಂದು ಇಬ್ಬರು ಅಪರೀಚಿತ ವ್ಯಕ್ತಿಗಳು ನನಗೆ ನಮ್ಮ ಮನೆಯಲ್ಲಿ ಹಿಂದಿನಿಂದ ಬಂದು ನನ್ನ ನನ್ನ ಬಾಯಿಗೆ ಒಂದು ಬಟ್ಟೆ ಹಚ್ಚಿ ನನಗೆ ಬೆಹೋಷ ಮಾಡಿ ನನ್ನ ಕೊರಳಲ್ಲಿ ಇದ್ದ 3 ವರೆ ತೊಲೆಯ ಬಂಗಾರದ ಗಂಟನ ಅ: ಕಿ: 1,75,000/- ಹಾಗೂ ಬಲಕೀವಿಯಲ್ಲಿನ 1 ಗ್ರಾಂ ಬಂಗಾರದ ಗುಂಡಿನ ಒಲೆ ಅ;ಕಿ: 5,000/- ರೂಪಾಯಿ ಹೀಗೆ ಒಟ್ಟು ಬಂಗಾರದ ಅ:ಕಿ: 1,80,000/- ರೂಪಾಯಿ ನೇದ್ದು ಸುಲಿಗೆ ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಭಾಲ್ಕಿ ಗ್ರಾಮೀಣ ಠಾಣೆ ಅಪರಾಧ ಸಂಖ್ಯೆ 118/2022 ಕಲಂ 78(3) ಕೆಪಿ ಕಾಯ್ದೆ :-

ದಿನಾಂಕ. 03/08/2022 ರಂದು 1430 ಗಂಟೆಗೆ ನಾನು ಭಾಲ್ಕಿ ಗ್ರಾಮೀಣ ವೃತ್ತ ಕಛೇರಿಯಲ್ಲಿದ್ದಾಗ ಹರನಾಳ ಗ್ರಾಮಲ್ಲಿ ಒಬ್ಬ ವ್ಯಕ್ತಿಯು ನಸೀಬಿನ ಮಟಕಾ ಜೂಜಾಟ ನಡೆಯುಸುತ್ತಿದ್ದಾನೆ ಅಂತ ಖಚಿತ ಬಾತ್ಮಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹರನಾಳ ಗ್ರಾಮದ ಬಸ ನಿಲ್ದಾಣ ಹತ್ತಿರ 1510 ಗಂಟೆಗೆ ಹೋಗಿ, ನಿಂತು ನೋಡಿದಾಗ ಒಬ್ಬ ವ್ಯಕ್ತಿಯು 1 ರೂಪಾಯಿ 80 ರೂಪಾಯಿ, 1 ರೂಪಾಯಿ 80 ರೂಪಾಯಿ, ಇದು ಕಲ್ಯಾಣಿ ಮಟಾಕಾ ನಸೀಬಿನ ಜೂಜಾಟ ಅಂತ ಸಾರ್ವಜನಿಕರಿಗೆ ಕೂಗಿ, ಕೂಗಿ ಕರೆದು ಮಟಕಾ ಚೀಟಿ ಬರೆದುಕೊಳ್ಳುವುದನ್ನು ಖಚಿತ ಪಡಿಸಿಕೊಂಡು, ಪಂಚರ ಸಮಕ್ಷಮ ಸಿಬ್ಬಂದಿಯೊಂದಿಗೆ ಒಮ್ಮೆಲೆ 1515 ಗಂಟೆಗೆ ಅವನ ಮೇಲೆ ದಾಳಿ ಮಾಡಿ ಅವನಿಗೆ ಹಿಡಿದುಕೊಂಡು ಅವನ ಹೆಸರು ವಿಚಾರಿಸಿದಾಗ ಅವನು ತನ್ನ ಹೆಸರು ರಾಜಕುಮಾರ ತಂದೆ ಬಕ್ಕಪ್ಪ ಹೂಗಾರ 26 ವರ್ಷ ಜಾ; ಹೂಗಾರ ಉ: ಒಕ್ಕಲುತನ ಸಾ:ಹರನಾಳ ಅಂತ ತಿಳಿಸಿದನು. ನಂತರ ಅವನಿಗೆ ಮಟಕಾ ಚೀಟಿ ಬರೆದುಕೊಳ್ಳುವದಕ್ಕೆ ಸಂಬಂಧಿಸಿದ ವಸ್ತುಗಳನ್ನು ನೀಡುವಂತೆ ಕೇಳಿದಾಗ ಅವನು ತನ್ನ ಹತ್ತಿರದಿಂದ 1) 03 ಮಟಕಾ ಚೀಟಿ 2) ಒಂದು ಬಾಲ ಪೇನ್ 3) ನಗದು ಹಣ. 4360/- ರೂ ನೇದ್ದವುಗಳನ್ನು ಹಾಜರು ಪಡೆಸಿದ್ದು, ಸದರಿಯವನಿಗೆ ಈ ವಸ್ತುಗಳು ಯಾವುದಕ್ಕೆ ಸಂಬಂಧಿಸಿವೆ ಅಂತ ಇನ್ನೊಮ್ಮೆ ಕೇಳಿದಾಗ ಅವನು ಇವು ಮಟಾಕಾ ಚೀಟಿ ಬರೆದ ಹಣ ಇರುತ್ತವೆ ಅಂತ ತಿಳಿಸಿದ್ದು ,ಅವನ್ನೆಲ್ಲಾ ಪಂಚರ ಸಮಕ್ಷಮ ಜಪ್ತ ಮಾಡಿಕೊಂಡು ಅತನ ವಿರುದ್ದ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.